# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | |
|---|---|---|
| ಹೆಸರು | : ಹನಮಂತ ನರಳೆ | ಫ್ರಾಸಾ-18 |
| ತಂದೆ ಹೆಸರು | : ಕಾಶಿಪತಿ | ಚಾಸಾ- |
| ವರ್ಷ | : 39 ವರ್ಷ | |
| ಉದ್ಯೋಗ | : ಪಿ ಎಸ್ ಐ, ಬಾದಾಮಿ ಪೊಲೀಸ ಠಾಣೆ | |
| ವಿಳಾಸ | : ಬದಾಮಿ | |

ದಿಃ 19.12.2025 ರಂದು ಸಾಕ್ಷಿ ವಿ.ಸಿ ಮೂಲಕ ಹಾಜರಾಗಿದ್ದು, ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನಾನು ಅಕ್ಟೋಬರ 2021 ರಿಂದ ಮೇ, 2022 ರವರೆಗೆ ಪಿ ಎಸ್ ಐ ಅಂತಾ ಬಾಗಲಕೋಟೆ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 11.12.2021 ರಂದು ಚಾಸಾ-33 ರವರಿಂದ ಈ ಪ್ರಕರಣದ ಕಡತವನ್ನು ಅಲ್ಲಿಯವರೆಗೆ ಆದ ತನಿಖೆಯನ್ನು ಪರಶೀಲಿಸಿರುತ್ತೇನೆ. ನಂತರ ನಾನು ಬಾಗಲಕೋಟೆ ಕಟ್ಟಿ ಆಸ್ಪತ್ರೆಗೆ ಭೇಟಿ ನೀಡಿದಾಗ ಗಾಯಾಳು/ಯಮನಪ್ಪ ರವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದರು.

3. ದಿಃ 12.12.2021 ರಂದು ಬೆಳಿಗ್ಗೆ 9-30 ರಿಂದ 10-30 ಗಂಟೆಯವರೆಗೆ ಬೆಣ್ಣೂರ ಗ್ರಾಮದಲ್ಲಿರುವ ಆರೋಪಿತರ ಮನೆಯ ಮುಂದೆ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಚಾಸಾ-14 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ, ಸ್ಥಳದಲ್ಲಿ ಬಿದ್ದಿದ್ದ ಒಂದು ಕೊಡಲಿ ಕಾವು, ಒಂದು ಹಿಡಿಗೈ ಅಳತೆ ಕಲ್ಲು, ಡಾಂಬರ ರಸ್ತೆ ಮೇಲೆ ಬಿದ್ದಿದ್ದ ಗಾಯಾಳುವಿನ ಒಣಗಿದ ರಕ್ತ ವನ್ನು ಸಂಗ್ರಹಿಸಿರುತ್ತೇನೆ. ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-4 ಪಂಚನಾಮೆ ಕಾಲಕ್ಕೆ ಜಪ್ತಿಪಡಿಸಿಕೊಂಡ ಒಂದು ಕೊಡಲಿ ಕಾವು, ಒಂದು ಹಿಡಿಗೈ ಅಳತೆ ಕಲ್ಲು, ಡಾಂಬರ ರಸ್ತೆ ಮೇಲೆ ಬಿದ್ದಿದ್ದ ಗಾಯಾಳುವಿನ ಒಣಗಿದ ರಕ್ತ ವನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾಲು-3 ರಿಂದ 5 ಎಂದು ಗುರುತಿಸಲಾಗಿದೆ. ನಿಪಿ-4 ಪಂಚನಾಮೆ ಕಾಲಕ್ಕೆ ಒಂದು ಕಚ್ಚಾ ನಕ್ಷೆ ತಯಾರಿಸಿರುತ್ತೇನೆ. ಸಾಕ್ಷಿ ಸದರಿ ನಕ್ಷೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-26 ಎಂದು, ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ನಿಪಿ-4 ಪಂಚನಾಮೆ ಕಾಲಕ್ಕೆ ತೆಗೆದ 5 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ.

4. ಅದೇ ದಿನ ನಮ್ಮ ಸಿಬ್ಬಂದಿ ಆರೋಪಿತರನ್ನು ಪತ್ತೆ ಮಾಡಿ ನನ್ನ ಮುಂದೆ ಠಾಣೆಯಲ್ಲಿ ಹಾಜರುಪಡಿಸಿದ್ದು, ಆರೋಪಿತರನ್ನು ವಿಚಾರಣೆ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ಆರೋಪಿತರ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು, ನಂತರ ರಿಮ್ಯಾಂಡ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

5. ಅದೇ ದಿನ ಸಂಜೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಾಯಾಳು ಯಮನಪ್ಪ ರವರ ರಕ್ತ ಕಲೆಯಾದ ತಿಳಿ ನೀಲಿ ಬಣ್ಣದ ಶರ್ಟನ್ನು ಹಾಜರುಪಡಿಸಿದ್ದು ಅದನ್ನು ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಶಾನೆ ಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ನಿಪಿ-6 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡ ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು ಮಾಲು-1 ಎಂದು ಗುರುತಿಸಲಾಗಿದೆ.

6. ನಂತರ ಜಪ್ತಾದ ಎಲ್ಲಾ ಮಾಲುಗಳನ್ನು ಮಾಲ ಪಟ್ಟಿ ಸಂಖ್ಯೆ 166/2021 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ಮಾಲು ಪಟ್ಟಿ ಸಂ.166/2021 ನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-27 ಎಂದು, ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ-13 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-16 ರವರು ನನ್ನ ಮುಂದೆ ನಿಪಿ-11 ರಂತೆ ಹೇಳಿಕೆ ನೀಡಿರುತ್ತಾರೆ.

7. ದಿಃ 13.12.2021 ರಂದು ಮಧ್ಯಾಹ್ನ 2 ಗಂಟೆಗೆ ಗಾಯಾಳ ಯಮನಪ್ಪ ಚಿಕಿತ್ಸೆ ವೇಳೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ಕಟ್ಟಿ ಆಸ್ಪತ್ರೆಯಿಂದ ಮಾಹಿತಿ ಬಂದಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ಮಾಹಿತಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-20(ಬಿ) ಎಂದು ಗುರುತಿಸಲಾಯಿತು. ನಂತರ ಈ

ಪ್ರಕರಣದಲ್ಲಿ ಕಲಂ 302 ಐಪಿಸಿ ಯನ್ನು ಅಳವಡಿಸಿಕೊಳ್ಳಲು 1 ನೇ ಹೆಚ್ಚುವರಿ ಜೆ ಎಂ ಎಫ್ ಸಿ ನ್ಯಾಯಾಲಯ ಬಾಗಲಕೋಟೆ ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-28 ಎಂದು, ಸಾಕ್ಷಿ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ತಲುಪಿಸಿದ ಬಗ್ಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಕಲಂ 302 ಐಪಿಸಿ ಅಳವಡಿಸಿಕೊಳ್ಳಲು ನೀಡಿದ ಮನವಿ ಪತ್ರ ಸಲ್ಲಿಸಿದ ಬಗ್ಗೆ ನಮ್ಮ ಸಿಬ್ಬಂದಿ ವರದಿಯನ್ನು ನೀಡಿರುತ್ತಾರೆ. ಸಾಕ್ಷಿ ಸದರಿ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-29 ಎಂದು, ಸಾಕ್ಷಿ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣವು ಘೋರ ಸ್ವರೂಪದ ಪ್ರಕರಣವಾದ್ದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-35/ಸಿಪಿಐ ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಶ್ರೀ. ವಿ ಎಸ್ ಎಂ ವಕೀಲರಿಂದ** ಆರೋಪಿತರ ಪರ

ಬೆಣ್ಣೂರ ಗ್ರಾಮಕ್ಕೆ ಸ್ಥಳ ಪಂಚನಾಮೆ ಜರುಗಿಸಲು ಹೋಗಿದ್ದಾಗ ಜಡ್ರಾಮಕುಂಟಿ ಗ್ರಾಮದ ಊರಿನವರು ಬಂದಿದ್ದು, ಅವರನ್ನು ಪಂಚನಾಮೆ ಕಾಲಕ್ಕೆ ಪಂಚಸಾಕ್ಷಿಯಾಗಿ ಸಹಕರಿಸಬೇಕು ಎಂದು ಕೋರಿಕೊಂಡಿರುತ್ತೇನೆ. ಚಾಸಾ-3 ರವರು ಪಿರ್ಯಾದಿ/ಚಾಸಾ-1 ರವರ ಊರಿನವರು ಹಾಗೂ ಚಾಸಾ-4 ರವರು ಚಾಸಾ-1 ರವರ ಸಂಬಂಧಿಕರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳವನ್ನು ಚಾಸಾ-14 ರವರು ತೋರಿಸಿರುತ್ತಾರೆ. ನಿಶಾನೆ ಪಿ-4 ಪಂಚನಾಮೆ ಮೇಲೆ ಚಾಸಾ-14 ರವರ ಸಹಿ ಕಂಡುಬರುವುದಿಲ್ಲ ಎಂದರೆ ಸರಿ. ನಿಶಾನೆ ಪಿ-4 ಪಂಚನಾಮೆಯನ್ನು ನಮ್ಮ ಸಿಬ್ಬಂದಿ/ಗುಡ್ಡಳ್ಳಿ ಎನ್ನುವವರು ಬರೆದಿರುತ್ತಾರೆ. ಗುಡ್ಡಳ್ಳಿ ರವರ ಸಹಿ ಪಂಚನಾಮೆ ಮೇಲೆ ಕಂಡುಬರುವುದಿಲ್ಲ ಮತ್ತು ಅವರನ್ನು ದೋಷಾರೋಪಣ ಪಟ್ಟಿಯಲ್ಲಿ ಸಾಕ್ಷಿಯಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ಮು ಮಾಲು -3 ಮತ್ತು 4 ಗಳಿಗೆ ರಕ್ತದ ಕಲೆಗಳು ಆಗಿರಲಿಲ್ಲ. ಘಟನಾ ಸ್ಥಳವು ಸಾರ್ವಜನಿಕರ ರಸ್ತೆಯಾಗಿದ್ದು, ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ. ಚಾಸಾ-1 ರವರು ಠಾಣೆಗೆ ಹಾಜರಾಗಿ ಗಾಯಾಳು ಯಮನಪ್ಪ ರವರಿಗೆ ಸೇರಿದ ಯಾವುದೇ ರಕ್ತ ಕಲೆಯಾದ ಶರ್ಟನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅದನ್ನು ನಿಪಿ-6 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರು ಯಾವುದೇ ಘಟನಾ ಸ್ಥಳ ತೋರಿಸಿರುವುದಿಲ್ಲ ಮತ್ತು ಪಂಚರ ಸಮಕ್ಷಮ ನಿಪಿ-4 ರಂತೆ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ

ಸರಿಯಲ್ಲ.  ಮು ಮಾಲು-3 ರಿಂದ 5 ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-13 ರಿಂದ 16 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .